Volume: 1 Issue: 1 Pages: 82-85
International Journal of Research in Academic World
E-ISSN: 2583-1615
Impact Factor: 3.133
Received: 19/August/2021 Int. J Res. Acad. World. 2021; 1(1):82-85 Accepted: 25/September/2021

# ಮಾದಾರ ಚೆನ್ನಯ್ಯ ಮತ್ತುಜೇಡರ ದಾಸಿಮಯ್ಯನವರ ವೈಚಾರಿಕ ನಿಲುವು

*[1]ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ

*[1]ಸಹ ಪ್ರಾಧ್ಯಾಪಕರು ಎಸ್.ಎಮ್.ಭಂಡಾರಿ ಮತ್ತುರಾಟಿ ಪದವಿ ಮಹಾವಿದ್ಯಾಲಯ ಗುಳೇದಗುಡ್ಡ ಬಾಗಲಕೋಟೆ ಜಿಲ್ಲೆ, ಕರ್ನಾಟಕ, ಭಾರತ.

**Abstract**

ಡಂಗುರವಾದ ಬೊಗಳೆತನವು ಭಯ ಬಿದ್ದು, ಪ್ರಭುತ್ವದ ಆಗರವಾಗಿದ್ದ ತನ್ನ ಅಸ್ತಿತ್ವ ಕಳೆದುಕೊಂಡು ಓಡಿಹೋದವು. ಜಪ-ತಪ ನೇಮಗಳು ನುಚ್ಚುನೂರಾದ ಬಗೆ, ಶಾಸ್ತ್ರಗಳೆಲ್ಲ ಕೊಚ್ಚಿಹೋದ ಮತ್ತುಜೊಳ್ಳುಕಥೆ ಹಾಳಾದ ದೃಶ್ಯ ಇಲ್ಲಿತೆರೆದುಕೊಂಡಿದೆ. ಜಾತಿ-ವರ್ಗಗಳು ನಾಶವಾಗಿ ಶರಣ ಬೆಳಗು ಬೆಳೆಯಬೇಕೆಂಬ ಹರಿಹರನ ಆಶಯ. ದೇವಾಲಯ ಪ್ರವೇಶವಿಲ್ಲದ ದಮನಿತರನ್ನುದೇವನೇಹುಡುಕಿ ಕೊಂಡು ಬರುತ್ತಾನೆ. ದೇವರಿಗಾಗಿ ಹಂಬಲಿಸದೆ ಅಂತರಂಗದ ಭಕ್ತಿಯಲ್ಲಿಆರಾಧಿಸಿ, ದೇಹದೊಳಗೆ ದೇವಾಲಯ ಮತ್ತುದೇವನಿದ್ದಾನೆ. ನಡೆ ನುಡಿ ಸಿದ್ಧಾಂತವಾಗಬೇಕು. ಮನುಷ್ಯನ ಬದುಕು ನಶೆ ಒಂದು ಬಗೆಯಾದರೆ, ನುಡಿಯೊಂದು ಬಗೆಯಾಗಕೂಡದು. ವಿಪ್ರರಿಗೆ ತಮಗೊಂದು ಬಟ್ಟೆಇತರರಿಗೊಂದು ಬಟ್ಟೆ. ಲಿಂಗಾಯತದಲ್ಲಿಬಹಳ ಸ್ಪಷ್ಟ ಬದುಕು-ನುಡಿ ಬೇರೆ ಬೇರೆ ಅಲ್ಲ. ಹೀಗಾದರೆ ಕುಲಹೊಲೆ ಸೂತಕವಿಲ್ಲ ಎಂಬುದನ್ನುಚನ್ನಯ್ಯನು ಸ್ಪಷ್ಟವಾಗಿ ನುಡಿಯುವನು.

**Keywords:** ಮಾ.ಚೆ:- ಮಾದಾರ ಚೆನ್ನಯ್ಯ, ಶಿ.ಭ:- ಶಿವಭಕ್ತಿ, ನ.ನು.ಸಿ:- ನಡೆ ನುಡಿ ಸಿದ್ಧಾಂತ, ರಾ.ನಾ:- ರಾಮನಾಥ, ಲಾ.ಮು.:- ಲಾಳಿಯ ಮುಳ್ಳು

## Introduction

ಮಾದಾರ ಚನ್ನಯ್ಯನ ವ್ಯಕ್ತಿತ್ವ ಕಾಣುವುದು ಆತನ ಕಾಯಕ ಸ್ಥೈರ್ಯದಲ್ಲಿ, ಹರಿಹರನು 'ಮಾದಾರ ಚನ್ನಯ್ಯನ ರಗಳೆಯನ್ನುಬರೆದು ಚನ್ನಯ್ಯನು ಗುಪ್ತ ಭಕ್ತ, ಕಾಯಕದೊಳು ಒಂದಾದ ಭಕ್ತ. ಕರಿಕಾಲ ಚೋಳನ ಅರಮನೆಯಲ್ಲಿಕುದುರೆ ಚಾಕರಿ ಮಾಡಿಕೊಂಡಿದ್ದರೂ ಸಾಮಾನ್ಯವಾಗಿರಲಿಲ್ಲ. ಲಿಂಗಸಿದ್ದಿಯಾಗಿ ಬೆಳೆದವನು.

ಚೋಳ ದೇಶ ಅದು ಶಿವನ ತವರುಮನೆ. ತಮಿಳುನಾಡು ಅರವತ್ತೂರು ಪುರಾತನರ ತಾಣ. ಊರು ಅಂದ್ರೆಅದು ಶಿವನ ಸದರಾವ ಶಿವಪುರ. ಸದ್ಭಕ್ತಿಯ ಸತ್ಕಳೆಯ ನೆಲೆವೀಡು. ಇಲ್ಲಿನ ಗುಪ್ತ ಮಾಹೇಶ್ವರನೆಂದರೆ ಚನ್ನಯ್ಯ. ಕಾಯಕದ ಐಸಿರಿಯ ಹರಿಕಾರ. ಹರಿಹರನು ಇವನನ್ನುಚಿತ್ರಿಸಿದ್ದುಶಿವನನ್ನುಸ್ವಾಗತಿಸುವ ಚನ್ನಯ್ಯನ ಪರಿ ಹೇಗಿತ್ತೆಂದರೆ, 'ಬಾರಯ್ಯ ಬಾರಾ ಶಿವಭಕ್ತ ಬಂಧುವೆ, ಬಾರಯ್ಯ ಬಾರಾ ಕಾರುಣ್ಯ ಸಿಂಧುವೆ' ಎಂದು ಹಂಬಲಿಸುವನು. ಚನ್ನಯ್ಯನ ಗುಪ್ತ ಭಕ್ತಿಗೆ ಮೆಚ್ಚಿ, ಒಂದು ದಿನ ಶಿವ ಪ್ರತ್ಯಕ್ಷನಾಗುತ್ತಾನೆ. ಚನ್ನಯ್ಯನ ಅಂಬಲಿ ಪ್ರಸಾದ ಸವಿದು ಸಂಭ್ರಮಿಸುತ್ತಾನೆ. ಈ ರಗಳೆಯಲ್ಲಿ ಏನೆಲ್ಲ ತಾರತಮಗಳ ತುಲನೆ ತಂದಿರುವದು. ದಿವ್ಯಾನ್ನ, ಅಮೃತಾನ್ನ, ಹಪ್ಪಳ, ತುಪ್ಪ, ಕೆನೆ ಮೊಸರು, ಸಕ್ಕರೆ, ಹಾಲು, ಭಕ್ಷ್ಯ ಭೋಜನ ತಂದಿರಸಿದ ಚೋಳನ ಭಕ್ತಿಯನ್ನುನಯವಾಗಿ ನಿರಾಕರಿಸಿ, ಚನ್ನಯ್ಯನ ಅಂಬಲಿ ಸವಿದು ಅಂಬಲಿ-ಅಮೃತ ಒಂದೇಎಂದು, ಸಿರಿತನ-ಬಡತ ಮಾನವನಿಗೆ ಕತ್ತಾಲ ಬೆಳದಿಂಗಳಾಟ ಸ್ಥಿರವಲ್ಲವೆಂಬುದನ್ನುಸಾರುತ್ತಾನೆ. ಈ ರಗಳೆಯ ಆರಂಭ ಪದ್ಯದಲ್ಲಿಬರುವ ಸಾಲುಗಳು 4

"ವೇದದ ಡಂಗುರಂ ಹೆದರಿ ಸೈವರಗಾದವು, ಶಾಸ್ತ್ರ ಸಂಭ್ರಮಂ ಹೋದವು ನಿಚ್ಚ ಲೋದುವ ಪುರಾಣದ ಮಾಲೆಗಳೆಂಬುವೆಲ್ಲ ಹಾ ಳಾದವು ಜಪತಪನೇಮ ಸಂಧ್ಯಾಸಮಾಧಿಗಳೆಂಬಿವೆಲ್ಲ ನುಚ್ಚನೂ ರಾದವು ಹಂಪೆಯೊಳ್ಳವರ ಚನ್ನನ ಕೂಡೊಲಿದುಂಡ ಕಾರಣಂ ||

(ಹರಿಹರ ರಗಳೆ ಪು. ೪೬೯)

ಡಂಗುರವಾದ ಬೊಗಳೆತನವು ಭಯ ಬಿದ್ದು, ಪ್ರಭುತ್ವದ ಆಗರವಾಗಿದ್ದ ತನ್ನ ಅಸ್ತಿತ್ವ ಕಳೆದುಕೊಂಡು ಓಡಿಹೋದವು. ಜಪ-ತಪ ನೇಮಗಳು ನುಚ್ಚುನೂರಾದ ಬಗೆ, ಶಾಸ್ತ್ರಗಳೆಲ್ಲ ಕೊಚ್ಚಿಹೋದ ಮತ್ತುಜೊಳ್ಳುಕಥೆ ಹಾಳಾದ ದೃಶ್ಯ ಇಲ್ಲಿತೆರೆದುಕೊಂಡಿದೆ.

ಆದರೆ ಕೊನೆಯ ಸಾಲಿನಲ್ಲಿಶಿವನು ಚನ್ನಯ್ಯನ ಪ್ರಸಾದ ಸವಿದ ಕಾರಣ ಇಷ್ಟೆಲ್ಲ ತಲ್ಲಣಕ್ಕೆಕಾರಣವಾಯಿತು ಎಂಬುದನ್ನುಪ್ರತಿಪಾದಿಸುತ್ತಾನೆ. ಈ ಹರಿಹರನ ಕಲ್ಪನೆಗೆ ಬಸವಣ್ಣನ ನುಡಿ - ಹಿಂದೆ ಸೂಚಿಸಿದಂತೆ ವೇದಕ್ಕೆವರೆಯ ಕಟ್ಟುವ, ನಿಗಳನಿಕ್ಕುವ, ಬೆನ್ನಬಾರನೆತ್ತವ - ಸ್ಥೈರ್ಯಚನ್ನಯ್ಯನ ಬೆಳಕು ಎಂಬುದನ್ನುಹರಿಹರನೂ ಕನ್ನಡೀಕರಿಸುತ್ತಾನೆ. ಅರಮನೆ ವೈಭೋಗದ ಬೋಜನ ಬಿಟ್ಟುಚನ್ನಯ್ಯನ ಅಂಬಲಿಯ ನೇಮ ಅಪ್ಯಾಯಮಾನವಾದ ಬಗೆ ಹೇಗೆ? ಅಂತಹ ಮಹಾಶರಣನನ್ನುತಾನು ಕಾಣಲೇಬೇಕೆಂದು ಗರಬಡಿದು ಹುಡುಕಲು ತಡುಕಾಡುವನು. 'ನೀವು ಕಾಣಿರೆ ನೀವು ಕಾಣಿರೆ' ಎಂಬಂತೆ 'ಚಂದ್ರಮೌಳಿಯ ಭಕ್ತನ ಎನ್ನಗೊಮ್ಮೆತೋರಿರೆ ಷಡ್ವರ್ಣಕರ್ಣನು ತೋರಿರೆ ಚನ್ನನಂ' ಎಂದು ಪರಿತಾಪದಿಂದ ಗುಡಿಸಲು ಹುಡುಕಿ ರಾಜನು ಬಂದಾಗ ಗುಡಿಸಲುಗೆ ಬಂದ ರಾಜನನ್ನುಕಂಡು ದಿಗ್ಭ್ರಮೆಗೊಳ್ಳುವ ಚನ್ನಯ್ಯನು 'ಅಯ್ಯೋದೇವ ಕರೆಯ ಕಳುಹಿದರೆ

*Corresponding Author: ಡಾ.ಸಣ್ಣೀರಪ್ಪ ಹಾಲಪ್ಪ ದೊಡ್ಡಮನಿ

ನಾನೇಬರುತ್ತಿದ್ದೆ' 'ಭಾನ ಕುಲದ ದರ್ಪಣನು ನೀನು, ನೃಪನಾಗಿ ನನ್ನಂತಹ ಅಂತ್ಯಜನ ವಾಸ ಆರಸಲುಂಟೆ ದೇವಾ?' ಎಂದಾಗ, ಕರಿಕಾಲನು ಚನ್ನಯ್ಯನ ಕಾಲಿಗೆರಗಿ ಬೇಡಿಕೊಳ್ಳುತ್ತಾನೆ. ಇತ್ತ (ಚನ್ನಯ್ಯನು) ತನ್ನ ಕಾಲು ಹಿಡಿದಿರುವ ರಾಜನನ್ನುಕಂಡು ಬೆರಗಾಗಿ 'ಅಯ್ಯಾಎನ್ನಾಳ್ವನೆ ಎನ್ನ ಕುಲವನರಿತೂ ಹೀಗೆ ಮಾಂಬುದೆ? ನನಗೆ ನರಕ ತಪ್ಪದು' ಎಂದು ಚಿಂತಿತನಾಗುತ್ತಾನೆ. ಪ್ರತಿಯಾಗಿ ಚೋಳನು ಹೇಳುವುದೆಂದರೆ "ದೇವನೊಲಿದಾತ ಜಾತ ಸತ್ಕುಲಂ, ಘನ ಮಹಿಮನೊಲಿದಾಜಾತಿಯೇನಿರ್ಮಲಂ ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ, ಸರ್ವಜ್ಞ ನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೆ ಬಿಡೆನಯ್ಯಾನಿಮ್ಮ ಪಾದವ ಬಿಟ್ಟುಬಾಳ್ವೆನು? (ಹರಿಹರನ ರಗಳೆ ಪು. ೪೨), ಕುಲದ ಮಹಿಮೆ ಮಾನವ ಜಾತಿಯ ಮುಕುರವಾದ ದಾರಿ ಕಂಡು ಕೊಂಡ ಪರಿ ಕೇಳುವ ರಾಜನು ಗುಪ್ತ ಭಕ್ತಿಯ ಶ್ರಮದ ಮಾರ್ಗವನ್ನುಅರ್ಥೈಸಿಕೊಳ್ಳುವ ಮೂರ್ತಿಯಾಗಿ ಕಾಣವನು. ಹಾಗೆ ಸರಳ ಭಕ್ತಿಬದುಕಾಗುವ ಮತ್ತುನಿರಾಡಂಬರದ ವಾಸ್ತವತೆ ಜೀವಸೆಲೆಯ ಆಗರ ಎಂಬುದನ್ನುತಿಳಿಸುವುದು. ಚನ್ನಯ್ಯನ ತಿಳುವಳಿಕೆ ದುಡಿವವರ ಕುರುಹು. 'ಗುಪ್ತಾರ್ಚನೆ ಶ್ರೇಷ್ಠ, ಆಡಂಬರಕ್ಕಿಂತಲೂ ಅಭಿಮಾನ ಧನನಾಗುವ ಪರಿ ಮತ್ತುಶಿವ ಮೆಚ್ಚಿಕರೆದೊಯುವ, ಗಣ ಪದವಿಯನ್ನೀವ 'ಉಲಿವ ವೇದಂಗಳ ಶಿಖಾರತ್ನನಾಗಿ, ಮಹಾನಿಧಿ ಮಹಾದಾನಿಯಾದ ಇವನನ್ನುಹಂಪೆಯ ವಿರೂಪಾಕ್ಷ ನೊಪ್ಪಿಗಂ' ಎಂದು ಮುಗಿವುದು.

ಜಾತಿ-ವರ್ಗಗಳು ನಾಶವಾಗಿ ಶರಣ ಬೆಳಗು ಬೆಳೆಯಬೇಕೆಂಬ ಹರಿಹರನ ಆಶಯ. ದೇವಾಲಯ ಪ್ರವೇಶವಿಲ್ಲದ ದಮನಿತರನ್ನುದೇವನೇಹುಡುಕಿ ಕೊಂಡು ಬರುತ್ತಾನೆ. ದೇವರಿಗಾಗಿ ಹಂಬಲಿಸದೆ ಅಂತರಂಗದ ಭಕ್ತಿಯಲ್ಲಿ ಆರಾಧಿಸಿ, ದೇಹದೊಳಗೆ ದೇವಾಲಯ ಮತ್ತುದೇವನಿದ್ದಾನೆ. 'ಅಲ್ಲುಂಟು ಇಲ್ಲುಂಟು ಎಲ್ಲಿಂಟು' ಗಂಟೆ ಜಾಗಟೆಗಳ ಸದ್ದಿಗಿಂತ ಶುದ್ಧ ಮನದ ಭಕ್ತ ಶ್ರೇಷ್ಠ ಸಮಾಜವನ್ನುಆಡಂಬರದಿಂದ ಛೇದಿಸಿ ದೇವರನ್ನುಹುಡುಕುವದಕ್ಕಿಂತ, ನಿರಾಡಂಬರದಲ್ಲಿನಿಂತಲ್ಲೆಯೇನಿಜೈಕ್ಯನಾಗಿ ಶಿವನನ್ನುಆಕರ್ಷಿಸುವ ಮಾರ್ಗವೂ ಇದೇ. ಇದಕ್ಕೆಚನ್ನಯ್ಯ ಸಾಕ್ಷಿ ಎಂಬುದನ್ನುಹ 5 ಸೂಚಿಸುತ್ತಾನೆ.

ಮಾದಾರ ಚನ್ನಯ್ಯನ ಕುರಿತು ಬರೆದಿರುವ ಡಾ. ಎಂ. ಎಂ. ಕಲಬುರ್ಗಿಯವರು 'ಬಸವಣ್ಣನು ಮಾದಾರ ಚನ್ನಯ್ಯನ ಮಗ ನಾನು ಅಂತ ಹೇಳುವಾಗ ತಂದೆಯ ನಿಷ್ಟೆಯ ಕಾಯಕವನ್ನುಮಾಡಿಯೇತಿರುತ್ತೇನೆ ಎಂದು ದೈವ ಸಮ್ಮತ ಮಾತು ಹೇಳುವುದು ಕಂಡು ಬರುತ್ತದೆ. ಬ್ರಾಹ್ಮಣ್ಯದ ವೇದಾಗಮಗಳ ವಿರುದ್ಧ ಕ್ರಾಂತಿಗೈಯ್ದುಎಚ್ಚರಿಸಿದ್ದುಮಧ್ಯಮವರ್ಗದ ಕ್ಷತ್ರಿಯ, ವೈಶ್ಯ ವ್ಯಕ್ತಿಯಲ್ಲ, ಕೆಳವರ್ಗದ ಶೂದ್ರ ವ್ಯಕ್ತಿ. ಶತಶತಮಾನಗಳಿಂದ ತುಳಿಸಿಕೊಂಡು ನೆಲೆ ತಪ್ಪಿದ ಶೂದ್ರನಿಂದಲೇಇಂಥ ಪ್ರತಿಭಟನೆ ಸಾಧ್ಯ. ಏಕೆಂದರೆ ಅವನು ಗ್ರಂಥಗಳು ಬ್ರಾಹ್ಮಣರ ಕೈಯಿಂದ ಮಾಡಿಸಿದ ಅನ್ಯಾಯಗಳ ನೇರ ನೋವನ್ನುಉಂಡವನಾಗಿದ್ದಾನೆ' (ಪು. ೪೮೪, ಡಾ. ಎಂ. ಎಂ. ಕಲಬುರ್ಗಿ, ಲೇಖನ ಸಾಹಿತ್ಯ ಭಾಗ- 2)

'ಕೈಯುಳಿ ಕತ್ತಿಅಡಿಗೂಂಟಕ್ಕಡಿಯಾಗ ಬೇಡ ಅರಿ ನಿಜಾತ್ಮರಾಮ ರಾಮನ' ಈ ಅಂಕಿತದಲ್ಲಿವಚನ ಬರೆದವನು ಶಿವನೊಲುಮೆ ಪಡೆಯಲು ವೃತ್ತಿ-ಜಾತಿ-ಅಂತಸ್ತುಮುಖ್ಯವಲ್ಲ, ಶಿವಭಕ್ತಿಮುಖ್ಯವಾದುದೆಂಬ ವಿಚಾರಗಳು ಚನ್ನಯ್ಯ ಚರಿತ್ರೆಯಿಂದ ತಿಳಿಯುವುದು. ಚನ್ನಯ್ಯನವರ ವಚನಗಳಲ್ಲಿಕಾವ್ಯಾತ್ಮಕ ನಿಲುವು ಕಾಣದಿದ್ದರೂ ಸಾಮಾಜಿಕ ಕಳಕಳಿ ಅಧಿಕವಾಗಿರುವುದು. ಸಮಾಜಕ್ಕೆಶಾಪವಾದ ಜಾತಿ ದೃಷ್ಟಿಕೋನ ಕುಲ-ಜಾತಿ-ಹೊಲೆ ಇವುಗಳ ಕುರಿತು ನಡೆಸಿದ ಜಿಜ್ಞಾಸೆ ಹೊಸ ಭಾಷ್ಯವೆನಿಸಿದೆ.

ಆಚಾರದ ಹೊಲೆತನವನ್ನುಬಹಳ ಚನ್ನಾಗಿ ತನ್ನ ವಚನದಲ್ಲಿಹೇಳುವ ಚನ್ನಯ್ಯನು ಸ್ಪಷ್ಟವಾಗಿ ವ್ಯಕ್ತಿತ್ವ ಶುದ್ಧಿಯನ್ನುಪ್ರತಿಪಾದಿಸುತ್ತಾನೆ.

ನಡೆ ನುಡಿ ಸಿದ್ದಾಂತವಾದಲ್ಲಿಕುಲ ಹೊಲೆ ಸೂತಕವಿಲ್ಲ

ನುಡಿ ಲೇಸು, ನಡೆಯದರ್ಮವಾದಲ್ಲಿ, ಅದು ಬಿಡುಗಡೆಯಿಲ್ಲದ ಹೊಲೆ, ಕಳವು ಪಾರದ್ವಾರಂಗಳಲ್ಲಿಹೊಲಬನರಿಯದೆ, ಕೆಟ್ಟುನಡೆಯುತ್ತ, ಮತ್ತೆಕುಲಜರೆಂಬ ಒಡಲವರುಂಟೆ? ಆಚಾರವೆ ಕುಲ, ಅನಾಚಾರವೆ ಹೊಲೆ, ಇಂತೀಉಭಯ ತಿಳಿದರಿಯಬೇಕು. ಕೈಯುಳಿ ಕತ್ತಿಅಡಿಗೂಂಟಕ್ಕಡಿಯಾಗಬೇಡ, ಅರಿ ನಿಜಾ[ತ್ಮ] ರಾಮ ರಾಮನಾ.

ನಡೆ ನುಡಿ ಸಿದ್ಧಾಂತವಾಗಬೇಕು. ಮನುಷ್ಯನ ಬದುಕು ನಶೆ ಒಂದು ಬಗೆಯಾದರೆ, ನುಡಿಯೊಂದು ಬಗೆಯಾಗಕೂಡದು. ವಿಪ್ರರಿಗೆ ತಮಗೊಂದು ಬಟ್ಟೆಇತರರಿಗೊಂದು ಬಟ್ಟೆ. ಲಿಂಗಾಯತದಲ್ಲಿಬಹಳ ಸ್ಪಷ್ಟ ಬದುಕು-ನುಡಿ ಬೇರೆ ಬೇರೆ ಅಲ್ಲ. ಹೀಗಾದರೆ ಕುಲಹೊಲೆ ಸೂತಕವಿಲ್ಲ ಎಂಬುದನ್ನುಚನ್ನಯ್ಯನು ಸ್ಪಷ್ಟವಾಗಿ ನುಡಿಯುವನು. ಪೂರಕವಾಗಿ ನುಡಿಗೆಲಿಸಿ, ನಡೆ ದೂರವಾಗದು. ವ್ಯತ್ಯಾಸವಾದರೆ, ಬಿಡದು ಹೊಲೆತನ. ಪಾರದ್ವಾರಂಗಳಲ್ಲಿಹೊಲಬನರಿಯದೆ, ದುರಾಚಾರಿಗಳಾಗಿ ಒಡಲುಗೊಂಡ ಕುಲಜರೆಂದು ಬೀಗಲು ಸಾಧ್ಯವೆ? ಸದಾಚಾರ-ಶುದ್ಧತೆ-ಶ್ರೇಷ್ಠವೆಂಬ ಮತ್ತುದುರಾಚಾರ ಕನಿಷ್ಠತನದ ಒಡಲು. ಸದಾಚಾರ-ದುರಾಚಾರ ಇವುಗಳ ಅರ್ಥವಾದರೆ ಆತ್ಮ ರಾಮನ ಅರಿದಂತೆ. ಇಲ್ಲವಾದರೆ ಕೈಯುಳಿ ಕತ್ತಿಅಡಿಗೂಂಟಕ್ಕಡಿಯಾಗ[ಬೇಡ] ಬೇಕಗುತ್ತದೆ. ವೇದಾಗಮಗಳ ಬಾರ ಅಡಿಯ ಮಣಿಗೆ ಆಹಾರವಾಗಿ, ಚುಚ್ಚುವ ಮೊನೆಗೆ ಬಾರವಾಗಿ ನರುಳುವುದು ಏಕೆ? ನರಕುಲ ಹಲವು ಇದ್ದರೂ ಜನಿತ ಯೋನಿಯೊಂದೆ. ಮಾತಿನ ರಚನೆ ಎಷ್ಟಿದ್ದರೂ ಮರ್ಮವರಿಯಬೇಕು. ತಮ ಎಂಬುವಲ್ಲದಿಲ್ಲ ಎಂಬುದು ಮುಖ್ಯ ನಿಲುವು. ಬೆಳಗು

ಜೇಡರ ದಾಸಿಮಯ್ಯನ ಕುರಿತು ಗ್ರಹಿಸುವಾಗ ಡಾ. ಎಂ. ಎಂ. ಕಲಬುರ್ಗಿಯವರು ದೇವರ ದಾಸಿಮಯ್ಯ ಬೇರೆ ಜೇಡರ ದಾಸಿಮಯ್ಯ ಬೇರೆ ಎಂದು ಸ್ಪಷ್ಟವಾಗಿ ಗುರುತಿಸಿದ್ದಾರೆ. ದೇವರ ದಾಸಿಮಯ್ಯ ಇವನೊಬ್ಬ ಶೈವಗುರು ವಚನಕಾರನಲ್ಲ. ಬ್ರಹ್ಮಚಾರಿ, ಜೇಡರ ದಾಸಿಮಯ್ಯ ಒಬ್ಬ ಶರಣ ವಚನ ರಚನೆ ಮಾಡಿದವನು. ದೇವರ ದಾಸಿಮಯ್ಯನ ಕುರಿತು ಪುರಾಣ-ಕಾವ್ಯಗಳಲ್ಲಿಇವನು ಘಟ ಸರ್ಪಪವಾಡ ಮಾಡಿದರೆ, ಜೇಡರ ದಾಸಿಮಯ್ಯನು ವಸ್ತ್ರ ಪವಾಡ ಮತ್ತುತವನಿಧಿ ಪವಾಡ ಹಾಗೆ ದೇವಾಲಯದ ಬಾಗಿಲು ತರೆದ ಪವಾಡಗಳೂ ಇವೆ. ರಾಮನಾಥ ಜೇಡರ ದಾಸಿಮಯ್ಯನ ಅಂಕಿತ. ದೇವರ ದಾಸಿಮಯ್ಯನ ವಚನ ಶೀರ್ಷಿಕೆಯಿಲ್ಲ. ಜೇಡರ ದಾಸಿಮಯ್ಯನ ವಚನಗಳು ಎಂಬುದಕ್ಕೆಹಸ್ತ ಪ್ರತಿಗಳಲ್ಲಿಕಂಡುಬರುತ್ತದೆ. ೧೩ನೇಶತಮಾನದಲ್ಲಿ ಈ ಎರಡೂ ವ್ಯಕ್ತಿಗಳ ಪವಾಡ ಚರಿತ್ರೆಮಿಶ್ರಣಗೊಂಡಿವೆ. ಹಳಕಟ್ಟಿಯವರು ಇದಕ್ಕೆದೇವರ ದಾಸಿಮಯ್ಯನಿಗೆ ರಾಮನಾಥ ಅಂಕಿತ ಸೇರಿಸಿ ಮಿಶ್ರಕಥೆಯನ್ನುನಂಬಿ ಈ ಭ್ರಮೆ ಇನ್ನೂಗಟ್ಟಿಯಾಗಿದೆ ಎನ್ನುತ್ತಾರೆ. ಕಲಬುರ್ಗಿಜಿಲ್ಲೆಯ ಮುದನೂರಿನವನಾದ ದಾಸಿಮಯ್ಯನ ಸಂಬಂಧವು, ರಾಯಚೂರು ಜಿಲ್ಲೆಗೊಬ್ಬರ ಶಾಸನದಲ್ಲಿಕಾಣಿಸಿಕೊಳ್ಳುವುದು ಕಾರಣವೆಂದರೆ, ಗೊಟ್ಟೂರು ಈತನ ಹೆಂಡತಿ ದುಗ್ಗಳೆಯ ತವರೂರು ಇದಕ್ಕೆಸಾಕ್ಷಿ ಎಂಬಂತೆ ಡಾ. ಎಂ. ಎಂ. ಕಲಬುರ್ಗಿಯವರು ರಾಘವಾಂಕನದು ಎಂದು ಹೇಳಲಾಗುವ 'ದೇವಾಂಗ ದಾಸಿಮಯ್ಯನ ಪುರಾಣ'ದಲ್ಲಿಸಾಂಗತ್ಯ ರೂಪದಲ್ಲಿದೊರೆಯುವುದು (ಪು. ೪. ಡಾ. ಎಂಎಂಕೆ ಸಮಗ್ರ

ಸಾಹಿತ್ಯ ಲೇಖನ ಸಾಹಿತ್ಯ ಭಾಗ-೩) ಮುಂದೊರೆದು ದಾಸಿಮಯ್ಯನು ಗೊಬ್ಬರೂರಿನ ಮಲ್ಲಯ್ಯ
ಮಹಾದೇವಿಯವರ ಮಗಳಾದ ದುಗ್ಗಳೆಯನ್ನುಮದುವೆಯಾಗಿ, ಪವಾಡ ಮೆರೆದು ಮುದನೂರಿನ ಬಂದು, ಅಲ್ಲಿಯ ರಾಮೇಶ್ವರ ದೇವಾಲಯದ ಮಗ್ಗಲಲ್ಲಿಮನೆ ಮಾಡಿಕೊಂಡು ಜೀವಿಸಿದ್ದನೆಂದು ಪುರಾಣದ ಉಲ್ಲೇಖ ನೀಡಿದ್ದಾರೆ.

ಇದಲ್ಲದೆ ಗೊಟ್ಟೂರಿನ ೧೭ನೇಶತಮಾನದಲ್ಲಿರಾಮನಾಥ ದೇವರ ಉಲ್ಲೇಖ ಎರಡು ಸಲ ಬಂದಿದೆ. ಈಗ ದೇವಾಲಯ ಗೊಟ್ಟೂರಿನಲ್ಲಿಕಂಡು ಬರುವುದಿಲ್ಲ. ಈ ಶಾಸನ ಮಸೀದಿಯ ಆವರಣದಲ್ಲಿರುವುದರಿಂದ, ರಾಮನಾಥ ದೇವಾಲಯವೇಮಸೀದಿಯಾಗಿ ಮಾರ್ಪಟ್ಟಿರಬಹುದು. ೧೧ನೇಶತಮಾನದಲ್ಲಿಯೂ ರಾಮೇಶ್ವರ ದೇವರ ಉಲ್ಲೇಖವಿದೆ. (ಪು.೫, ಅದೆ).

ಜೇಡರ ದಾಸಿಮಯ್ಯನ ಮಹತ್ವ ತಿಳಿಯಲು ನಾವು ಬಸವಣ್ಣನ ವಚನವನ್ನುನೋಡುವುದೊಳಿತು. ಅವರ ಷಟ್ ಸ್ಥಲದ ವಚನಗಳಲ್ಲಿಬಸವಣ್ಣನವರು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ಜೇಡರ ದಾಸಿಮಯ್ಯ ಎಂಬ ಹೆಸರುಗಳಿಂದ 'ಒಟ್ಟು೧೮ ವಚನಗಳಲ್ಲಿ' ಸ್ಮರಿಸಿದ್ದುಕಂಡು ಬರುತ್ತದೆ.

ಬಸವಣ್ಣನ ವಚನದಲ್ಲಿಭಕ್ತಿಯನಿಷ್ಠೆಗೆ ಹೆಸರಾದ ಮೂರು ಜನರನ್ನುಸ್ಮರಿಸಿ ಬಲವಾದ ಅವರ ಭಕ್ತಿಭಯಂಕರವಾದದ್ದು, ಅಂತ ವಚನ ಹೀಗಿದೆ.

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ

ಬಲ್ಲಾಳನ ವಧುವಿನೊಡನೆ ಸರಸ ವಾರಸವಾಡಿದಂದಿಂದ ಭಯ ಕಾಣಿರಣ್ಣ, ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣ, ದಾಸನ ವಸ್ತವ ಸೀಳಿದಂದಿಂದ ಭಯ ಕಾಣಿರಣ್ಣ, ಅಘಟಿತ ಘಟಿತರು ವಿಪರೀತ ಚರಿತರು, ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣ.

ಈ ವಚನದಲ್ಲಿಬಸವಣ್ಣದೇವರು ಅದೆ ಮೂರು ಜನ ಶರಣರಲ್ಲಿಭಕ್ತಿಪಾರಮ್ಯಕ್ಕೆಸಾಕ್ಷಿಯಾಗಿದ್ದನ್ನುಗುರುತಿಸುವುದು ಇವರಲ್ಲಿಒಬ್ಬರು ವಧುವನಿತ್ತ, ಇನ್ನೊಬ್ಬರು ಮಗನನ್ನಿತ್ತ ಮತ್ತೊಬ್ಬರು ವಸ್ತ್ರವ ಸೀಳಿ ಭಯಂಕರ ಉಗ್ರ ಭಕ್ತತನಕ್ಕೆಹೆಸರಾದವರು.

ದಾಸನ ವಸ್ತ್ರವ ಬೇಡದ ಮುನ್ನ ತಮನಿಧಿಯನಿತ್ತಡೆ ನಿಮ್ಮ ದೇವನೆಂಬೆ.
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯ ಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವನೆಂಬೆ.
ಬಲ್ಲಾಳನ ವಧುವ ಬೇಡದ ಮುನ್ನ
ಸ್ವಯಲಿಂಗವ ಮಾಡಿದಡೆ ನಿಮ್ಮ ದೇವನೆಂಬೆ.

ದೇಹಿ ನೀನು, ವ್ಯಾಪರಿಗಳು ನಮ್ಮವರು, ಬೇಡು ಕೂಡಲಸಂಗಮದೇವಾ ನಮ್ಮವರು ಕೈಯಲು.

ದೇವನು ಇಷ್ಟೆಲ್ಲ ಬೇಡಿದ್ದಾನೆ ನಮ್ಮ ಶರಣರು ದಾನದಲ್ಲಿನಿಸ್ಸಿಮರು ಅವರ ಕಾಯ ಶಕ್ತಿಅನಂತ. ಬಡವರಲ್ಲಿಈ ಮೂರು ಜನ ಶರಣರ ಮಾರ್ಗಭಕ್ತಿಯು 'ಭಯ' ಸ್ವರೂಪದ್ದು. ಇವರು ಅಘಟಿತ ಘಟಿತರು; ವಿಪರೀತ ಚರಿತರು ಎಂದು ಹೇಳುತ್ತಾರೆ. ಇಲ್ಲಿಜಂಗಮನ ಪ್ರಸಾದಕ್ಕೆಂದು ಸಿರಿಯಾಳನು ಮಗನನ್ನುಕೊಂದುದು, ಜಂಗಮಕ್ಕೆವಧುವನ್ನುಕೊಟ್ಟ ಸಿಂಧುಬಲ್ಲಾಳನು, ನಿಜವಾಗಿಯೂ ಎದೆ ನಡುಗಿಸುವ ಉಗ್ರ ಭಕ್ತರು. ಇದೇರೀತಿ ದಾಸಿಮಯ್ಯ ವಸ್ತ್ರ ಕೊಟ್ಟರೂ ಎದೆ ನಡುಗಿಸುವ ಘಟನೆಯಾಗಿರಬೇಕಾದುದು ಸ್ವಾಭಾವಿಕ. ಆದರೆ ನಮ್ಮ ಪುರಾಣಗಳು "ಹಲವು ವರ್ಷನೇಯ್ದಿದ್ದ, ಒಂದು ಲಕ್ಷ ವರವ ಬೆಲೆಬಾಳುವ ವಸ್ತ್ರವನ್ನುದಾಸಿಮಯ್ಯ ಒಬ್ಬ ಜಂಗಮನಿಗೆ ಪುಕ್ಕಟೆಯಾಗಿ ಕೊಟ್ಟುತನ್ನ ಭಕ್ತಿಯನ್ನುಮೆರೆದ" ಎಂದು ಹೇಳುತ್ತವೆ.

ಈ ಪುರಾಣಕ್ಕಿಂತಲೂ ಆಲೋಚಿಸಬೇಕಿರುವ ಸಂಗತಿಯನ್ನುಡಾ. ಎಂ. ಎಂ. ಕಲಬುರ್ಗಿಯವರು ಗುರುತಿಸುವುದು ಹೀಗೆ. ದಾಸಿಮಯ್ಯನ ಜೀವನದಲ್ಲೂಸಿರಿಯಾಳ ಮತ್ತುಸಿಂಧುಬಲ್ಲಾಳವ ಉಗ್ರತ್ವದ ಭಕ್ತಿ, ಧರ್ಮಸಂಕಟ ದಾಸಿಮಯ್ಯನ ದಾನದಲ್ಲಿನಡೆದಿರಬಹುದು ಪುರಾಣ ಕರ್ತಕಾಲಾ ನಂತರ ಮರೆತಿರಬಹುದು. ಬಹುಶಃ ಅದು ದಾಸಿಮಯ್ಯ ತಾನು ಬತ್ತಲೆಯಾಗುವುದನ್ನೂಲೆಕ್ಕಿಸದೆ ತೊಟ್ಟ ಒಂದೇಒಂದು ಬಟ್ಟೆಯನ್ನುಬಿಚ್ಚಿಜಂಗಮನಿಗೆ ಕೊಟ್ಟಿರಬಹುದು, ವಿಪರೀತ ಚರಿತೆ ಎನಿಸುವ ದಾಸಿಮಯ್ಯನ ಜೀವನದಲ್ಲಿಘಟಿಸಿದ ನೈಜ ಘಟನೆಯಾಗಿರಬೇಕು. (ಪೂರ್ಣವಿಷಯ ನೋಡಿ ಪು- ೧೩, ಡಾ. ಎಂ ಎಂ ಕಲಬುರ್ಗಿಸಮಗ್ರ ಸಾಹಿತ್ಯ ಸಂಪುಟ:೩೫ ಲೇಖನ ಸಾಹಿತ್ಯ: ಭಾಗ-೩) ಈ ಹೊಸ ಕತೆ ತೆಲುಗು ಬಸವ ಪುರಾಣವು ಕಾಲಕ್ಕಿಂತ ಹಿಂದೆ ಹುಟ್ಟಿದೆ. ಅಷ್ಟೇಏಕೆ ಅಬ್ಬಲೂರಿನ ಸೋಮೇಶ್ವರ ದೇವಾಲಯದ ಗೋಡೆಯ ಮೇಲೆ ಬಿಡಿಸಲಾದ ಶಿಲ್ಪದಲ್ಲಿದಾನ ನೀಡಲು ಸಿದ್ಧವಾಗಿ ನಿಂತ ದಾಸಿಮಯ್ಯನ ಕೈಯಲ್ಲಿಒಂದು ವಸ್ತ್ರವಿದ್ದು, ಆತ ಇನ್ನೊಂದು ವಸ್ತ್ರ ಉಟ್ಟುಕೊಂಡಿರುವುದನ್ನುಗುರುತಿಸಿದ ಡಾ. ಎಂ. ಎಂ. ಕೆ. ಅವರು ಇದು ೧೩ನೇಶತಮಾನದ ಅಂತ್ಯದ ವೇಳೆಗಾಗಲೆ ಮೂಲ ಕಥೆ ಮಾಯವಾಗಿ ಪುರಾಣ ಕಥೆ ಪ್ರಚಾರ ಪಡೆಯಿತು ಎಂದು ಹೇಳಿದ್ದಾರೆ.

ದಾಸಿಮಯ್ಯನವರ ವೈಚಾರಿಕತೆ ಅತ್ಯುದ್ಭುತವಾದದು. ಅವರ ವಚನದಲ್ಲಿದೇವತ್ವಕ್ಕೆಹಾಕುಮ ಸವಾಲು ಭಕ್ತನು ಶಿವನಿಗಿಂತ ಮೇಲು ಶಿವನು ನಿರಾಕಾರದಲ್ಲಿತನ್ನ ಮಹಿಮೆ ತೆರೆದುಕೊಂಡರೆ, ಸಂಕಟಗಳ ಮೂರ್ತರೂಪವಾದ ಮಾನವನಾದರೂ ಮಾನವನೇದೊಡ್ಡವನು. ಶಿವಶಕ್ತಿಮರ್ನುಮುಂದೆ ಕಿರಿದು ಎಂಬುದನ್ನುಸಾರಿದ್ದಾನೆ. "ತರ್ಕೈಸಿ ನಿಮ್ಮನೊಪ್ಪುವ" ಜಿದ್ದಿಯ ಶರಣನೆಂ ಹೇಳಬೇಕು. ಜೇಡರ ದಾಸಿಮಯ್ಯನು ಬಾಧೆ ಹೇಳುವುದು ಹೀಗೆ-
ಒಂದಾಗಿಹವ್ಯೆದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?
ನಿಂದು ನೋಡಲು
ಜಗವಂದ್ಯನಾಗಿಪ್ಪೆಇನ್ನುನಿಂದಿಸುವೆನಾರಯ್ಯ? ರಾಮನಾಥ.

ಈ ವಚನದಲ್ಲಿಪಂಚಭೂತದೊಂದಿಗೆ ಸೂರ್ಯಚಂದ್ರರೂ ಸೇರಿ ನಂದಿವಾಹನ ರೂಪಾಗಿ ಪಡೆದ ನೀವು ದರ್ಶನ ಕೊಟ್ಟಿರಾದರೆ ನಿಮ್ಮ ನಿಲುವು 'ಹಸಿವು ಪಡೆದವನಾನು ವಿಷಯ ಸುಖ ಪಡಲು ಹಂಬಲಿಸಿದವನು ನೀನು' ನಿಮ್ಮನ್ನುಅಪ್ಪಿಕೊಂಡಡೆ ನಿಶ್ಚಯ ಮತ್ತುನಿತ್ಯ ಪ್ರಸಾದ ಕಾಣಾ ರಾಮನಾಥ ಎನ್ನುವನು.

ಎನ್ನ ನಾನರಿವುದಕ್ಕೆಮುನ್ನ ಎಲ್ಲಿದ್ದೆಯಯ್ಯಾ? ಎನ್ನೊಳಗೆ ಇದ್ದೆಯಯ್ಯಾ! ಎನ್ನ ನಾನರಿಯಲು ಮುಂದೆ ಬಂದು ಗುರುರೂಪವಾಗಿ ಎನ್ನೊಳಗೆ ಅಡಗಿದ್ದೆಯಲ್ಲ! ರಾಮನಾಥ.

ಎನ್ನೊಳಗಿನ ಅರಿವು ಮೈದೆರೆದು ಗುರುವಾದ ನೀನು, ಎನ್ನೊಳಗೆ ಇದ್ದು, ನಿನ್ನನ್ನುಅರ್ಥಮಾಡಿಕೊಳ್ಳುವಷ್ಟುಜಿಜ್ಞಾಸೆ ಮೂಡಿಸಿದ್ದು, ನಿನ್ನ ಲೀಲೆಯೇಎನ್ನಬೇಕು. 'ಒಡಲೇಒಂದು ಬಿನ್ನಾಣ'. ಈ ಬಿನ್ನಾಣ ಜಗವನಪ್ಪಿದೆ ಎನ್ನುವ ದಾಸಿಮಯ್ಯನವರ ಚಿಂತನೆ ವಾಸ್ತವ-

ಎನ್ನೊಡಲಾದಡೆ ಎನ್ನಿಚ್ಚೆಯಲ್ಲಿರದೆ? ನಿನ್ನೊಡಲಾದಡೆ ನಿನ್ನಿಚ್ಚೆಯಲ್ಲಿರದೆ? ಅದು ಎನ್ನೊಡಲು ಅಲ್ಲ, ನಿನ್ನೊಡಲು ಅಲ್ಲ.

ಅದು ನೀಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥ.

ಶರಣರಲ್ಲಿ ಇಚ್ಛೆ ಇದೆಯೋ ಇಲ್ಲವೊ ನಿನ್ನಲ್ಲಿ ಉಂಟು. ಇಬ್ಬರಲ್ಲೂ ಇದೆ. ಇಚ್ಛಾತೀತ ನಿಲುವುದಾಳದೆ. ಇರುವ ಒಡಲು ನಿನ್ನದು ಅಲ್ಲ ನನ್ನದು ಅಲ್ಲ. ಅದು ಜಗಕ್ಕಿದ ಬಿನ್ನಾಣ, ಇದೊಂದು ಚಿದ್ ಶಕ್ತಿಯ ವಯ್ಯಾರ ಎಂಬುದನ್ನು ಅರ್ಥೈಸುವುದು. ಆದರೂ

'ನಿಶ್ಚಯ ಪ್ರಸಾದ' ಕುರಿತು ದಾಸಿಮಯ್ಯರ ಚಿಂತನೆ 'ತರ್ಕೈಸಿ ಅಪ್ಪಿಕೊಳ್ಳುವುದು' ಮನ ಬೆರೆತು. ಮನ ಅರಿತು ಮನದೊಳಗಿನ ಮಾತಾಗಿ, ಮಾನವನ ಅರಿವು ನಿರಾಕಾರ ನಿರ್ವಲಯ, ನಿರಾಡಂಬರಗೊಂಡು ಇರುವನರಿತು ಒಪ್ಪಿಕೊಳ್ಳುವುದು ನಿಶ್ಚಯ ಪ್ರಸಾದ ಇದು ಪೂರ್ವನಿರ್ಧರಿತವೆನ್ನುವುದನ್ನು ಚನ್ನಾಗಿ ಪ್ರತಿಪಾದಿತವಾಗಿದೆ.

ಒಕ್ಕುದು ಪ್ರಸಾದವಲ್ಲ, ಮಿಕ್ಕುದ ಪ್ರಸಾದವಲ್ಲ, ಹತ್ತೆಕರೆದಿಕ್ಕಿದುದು ಪ್ರಸಾದವಲ್ಲ ತರ್ಕೈಸಿ ನಿಮ್ಮನಪ್ಪಿಕೊಂಡಡೆ ಅದು ನಿಶ್ಚಯ ಪ್ರಸಾದ ಕಾಣಾ! ರಾಮನಾಥ.

ಹತ್ತಿರ ಕರೆದಿಕ್ಕಿದುದು ಪ್ರಸಾದವಾಗದು. 'ಒಡಲಿಚ್ಛೆಗೆ ಭವಿಯ ಒಡಗೂಡಿ ಕೊಂಡು ಉ 9 ಹಡಿಕೆಯ ತಿಂದ ನಾಯಿ ಮುಂದುಡೆ ಬಗಳುವಂತೆ! ಭಕ್ತಿಯನ್ನು ಪ್ರಭೆಯಾಗಿಸಿಕೊಳ್ಳುವ ಛಾತಿ ಎಲ್ಲರಿಗೆ. ದಕ್ಕುವುದಿಲ್ಲ. ಒಡಲಿಚ್ಛೆಗೆ ಭವಿಯನ್ನಪ್ಪಿ, ಭವಿತನಗೂಡಿ ಉಂಡು, ಹೊಲಸು ತಿಂದ ನಾಯಿ ಬೊಗಳುವ' ರೂಪಕ. ಇದು ಶರಣತ್ವದಾಶ್ರಯ ಪಡೆದ ಜೀವಕ್ಕೆ ಅಂಜಿಕೆಗಳಿರುವದಿಲ್ಲ. ಭಯಗಳಿರುವುದಿಲ, ಮೃಡನಿಲ್ಲವನಲ್ಲದವನ ಕೂಳು ಆಗದೆ ಮೃಢನಿರುವ ಮನೆಯ ಕೂಳು ಪ್ರಸಾದವೆಂಬ ಪರಿಕಲ್ಪನೆಯೇ ಹೊಸದು.

ನನ್ನೊಳು ನೀನು ನಿನ್ನೊಳು ನಾನು ಸಾಗುವುದೊಂದು ಬಗೆ, ಜೀವದ ಬಗೆ, ಇದಕ್ಕೊಂದು ಬಟ್ಟೆದಟ್ಟೈಸಿದೆ. ಆತ್ಮಂ-ಪರಮಾತ್ಮ ಮತ್ತು ಜೀವಾತ್ಮ, ಗುರುಲಿಂಗಜಂಗಮದ ಸೂತ್ರವಿದು. ಉಸಿರ ರೂಪ ನಿನ್ನದು ದೇಹ ರೂಪ ನನ್ನದು. ಬೇರೆಯಾಗದು.

ಒಡಲಗೊಂಡವ ನಾನು; ಪ್ರಾಣವಿಡಿದವ ನೀನು, ಎನ್ನೊಡಲ ಸಂಚುವ ನೀಬಲ್ಲೆ! ನಿನ್ನ ಪ್ರಾಣದ ಸಂಚುವನಾ ಬಲ್ಲೆ ಇದು ಕಾರಣ

ಇದು ಎನ್ನೊಡಲಲ್ಲ ನಿನ್ನೊಡಲು

ನಿನ್ನ ಪ್ರಾಣವೆನ್ನಲ್ಲಿ ಆಡಗಿದ ಭೇದವ

ನೀಬಲ್ಲೆ, ನಾ ಬಲ್ಲೆನ್ನೆ ರಾಮನಾಥ.

ನೀನು ನನ್ನನ್ನು ಆಟವಾಡಿಸುವುದಾದರೆ ನಾನು ಆಡಿಸುವುದು ತಿಳಿದಿದೆ. ನೀಬಲ್ಲವನಲ್ಲದೆ ನಾನು ಬಲ್ಲನೆ?

ಒಡಲಗೊಂಡ ಮನುಜನ ಸ್ಥಿತಿ ಅರಿಯಬೇಕು. ಏಕೆಂದರೆ ನೀನು ಪ್ರಾಣವಿಡಿದವನು ಎನ್ನ ಒಡಲ ಸಂಚು ನಿನ್ನ ಪ್ರಾಣ ಸಂಚು ಬಲ್ಲವನು ನೀನೆ ಎಂಬುದು ದಾಸಿಮಯನ ಆತ್ಮದೊಳಗಣ ಪರಾಮಾತ್ಮನ ಸ್ಥಾನದ ನೆಲೆಗಟ್ಟು ಸಿದ್ದಿಸಿದೆ.

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ

ಸಮಗಾಲನಿಕ್ಕಿ ಆಣಿ ಯೇಳ ಮುಟ್ಟದೆ ಹಿಡಿದ ಲಾಳಿಯ ಮುಳ್ಳುಕಂಡಿಕೆಯ ನುಂಗಿತ್ತು.

ಈ ಸೀರೆಯ ನೆಯ್ದವ ನಾನೊ ನೀನೋ? ರಾಮನಾಥ.

ಕ್ರಿಯೆಕ್ಯವಾಗಿ ಸಮಗೊಳಿಸುವ ಸರಿಗೆ-ಉಂಕೆಯ ಸಾಧನ ನೆಪ ಮಾತ್ರ. ಲಾಳಿ ಮಗ್ನವನುಂಗುವ

ಲಾಳಿಯ ಮುಳ್ಳುಕಂಡಿಕೆಯನುಂಗಿತ್ತು ಎನ್ನುವ ದಾರ್ಶನಿಕತೆ ನೆಯ್ಗೆಯ ಸಾಕ್ಷಿಯಾಗಿದೆ. ಸಮುದಾಯ ಕೇಂದ್ರಿತ, ಕ್ರಿಯಾಕೇಂದ್ರಿತ ವಾಸ್ತವ ಬದುಕು ಆಚಾರಕ್ಕೂ ಅರ್ಥವಾಗಬೇಕು. ವಿಚಾರಕ್ಕೂ ನಿಲುಕಬೇಕು.

ಭೌತಿಕ ವಿಷಯಾಸಕ್ತಿಯೊಳು ಜೀವಿಸು ಬುದುಕು. ಯೋಗಿಕ ಪ್ರಾಣ ವಾಯುವಿಗೆ ಸಂಧಿಸಲಾಗದು. Physical matter ಗಿಂತಲೂ spiritual matter ಅಥವಾ ಭೌತಿಕ ಪ್ರಪಂಚಕ್ಕು ವೇದಾಂತದ ಪ್ರಪಂಚಕ್ಕೂ ವ್ಯತ್ಯಾಸವಿದೆ. ಇದರ ಅರ್ಥವರಿಯದು ಆಗಮ ನೆನಸಿಕೊಂಡು ದುಡಿಮೆಯ ದೇಹವೇಶ್ರೇಷ್ಠ, ದೇಹದ ನೂರು ಬಾಧೆಗಳಿವೆ. ಬಾದೆಗಳು ತಿಳಿಯಲು ಭೌತಿಕದಲ್ಲಿ ಜೀವಿಸಿ ನೋಡು ಎಂಬ ಸವಾಲನ್ನು ದಾಸಿಮಯ್ಯನವರು ಶಿವನಿಗೆ ಹಾಕುತ್ತಾರೆ. ಆತನ ವಚನದಲ್ಲಿ ಕಾಣಬಹುದು.

ಹಸಿದವರನ್ನು ಅಣುಕಿಸುವ ಸಮಾಜದಲ್ಲಿ ಹಸಿದವರನ್ನೇ ಕುರಿತು ಮಾತನಾಡುವ ದಾಸಿಮಯನು ನೈಜ ಹಸಿದ ಜೀವಿ. ಹಸಿದವರಿಗೆ ಮಾತ್ರ ಗೊತ್ತು 'ತುತ್ತು ಅನ್ನದ ಬೆಲೆ' ಎಂಬುದಕ್ಕೆ

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ ಒಡಲಗೊಂಡವನೆಂದು

ನೀನನ್ನ ಜಡಿದೊಮ್ಮೆ ನುಡಿಯದಿರ!

ನೀನೆನ್ನಂತೆ ಒಮ್ಮೆ ಒಡಲಗೊಂಡು ನೋಡ! ರಾಮನಾಥ.

ಹಸಿವನ್ನು ಮತ್ತು ಹಸಿದ ಜೀವಗಳನ್ನು ಕನಿಷ್ಠ ದೃಷ್ಟಿಯಿಂದ ಕಾಣುವ ಆಡಳಿತ ನಡೆಸುವ ಬಂಡವಾಳ ಶಾಹಿ ಮತ್ತು ಪುರೋಹಿತ ಶಾಹಿ ವ್ಯವಸ್ಥೆಗೆ ಅಂದಿನ ಕಾಲದಲ್ಲಿಯೇ ದಾಸಿಮಯನವರು ಉತ್ತರಿಸಿದ್ದಾರೆ. ಅಷ್ಟೇ ಅಲ್ಲ 'ದೇವರಾದರೆ ನನ್ನಂಥ ಮನುಷ್ಯನಾಗಿ ಒಡಲಗೊಂಡು ನೋಡು' ಎನ್ನುವ ಸವಾಲು ಹಾಕಿ ಬಡವನು ಸುಳ್ಳು ಅಲ್ಲಗಳೆಯಲಾಗದು. ಹಸಿದ ಜೀವನ ನೂರು ದಾರಿ ಹುಡುಕುವುದು ಅದನ್ನು ನಿಕೃಷ್ಟ ಬುದ್ದಿಯಿಂದ ಕಾಣಬಾರದು. ಅನ್ನಮಯ ಪ್ರಾಣಮಯ ಜಗತ್ತಿನಲ್ಲಿ ಪ್ರಾಣಮಯದಲ್ಲಿ ಅಷ್ಟೇನು ಹುರುಳಿಲ್ಲ ಅನ್ನಮಯದಲ್ಲಿ ಇರುವ ಬಗೆಯೇ ಅನನ್ಯವೆಂಬುದಿದೆ.

ಒಟ್ಟಿನಲ್ಲಿ ಜೇಡರ ದಾಸಿಮಯನ ವಚನಗಳಲ್ಲಿರುವ ಜೀವಪರ ನಿಲುವುಗಳು ವರ್ತಮಾನಕ್ಕೆ ಅತ್ಯಗತ್ಯ. ಅಲ್ಲಮ ಹೇಳುವ 'ನಾನು ದೇವನೋ ನೀನು ದೇವನೊ' ಎನ್ನುವ ವಾಸ್ತವ ಚಿಂತನಾ ಪ್ರಭೆ ಮಹಾಮಾನೆಯ ಬೆಳಕಾಗಿ ಸಾಮಾನ್ಯ ಬದುಕಿನ ಜೀವ ಸಲೆಯೂ ಜಂಗಮ ಚಿಂತನಾ ನಿಲುವಾಗಿ ಕಂಡು ಬರುತ್ತದೆ. ಇಂಥಾ ಶಿವಶರಣರ ಕುರಿತು ವಿಚಾರ ಹಂಚಿಕೊಳ್ಳಲು ಇನಿತಾದರೂ ಬೇಸರ ಬಾರದು ಅದು ಮನುಷ್ಯತ್ವ ಅರಿತಾಗ ನಮ್ಮ ಚಿಂತನೆಗಳು ತೋರಿಕೆಯಾಗದೆ ಬದುಕಾಗಿ, ಆಚಾರವಾಗಿ ಅನುಸಾರವಾಗಲು ನಮ್ಮ ಶ್ರಮ ಮತ್ತು ಬುದ್ದಿ ಮೇಲೈಸಬೇಕಿದೆ.

## References


1. ಶಿವಶರಣರ ವಚನ ಸಂಪುಟ- ಡಾಕ್ಟರ್ ವಿದ್ಯಾ ಶಂಕರ
2. ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ
3. ದಲಿತ ವಚನಕಾರರ ಒಂದು ಅಧ್ಯಯನ- ಡಾ. ಶಿವಾಜಿ ಕಾಂಬಳೆ
4. .ವಚನಕಾರರು ಮತ್ತು ದಲಿತ ಸಂವೇದನೆ:-ಡಾ. ಬಸವರಾಜ ಸಬರದ
5. ಇಪ್ಪತ್ತನೆ ಶತಮಾನದಲ್ಲಿ ಕರ್ನಾಟಕ ಮಹಿಳೆಯರ ಸಾಧನೆ (ಸಂ.) ಎಚ್.ಎಸ್. ಪಾರ್ವತಿ, ಡಾ. ನಿರುಪಮಾ, ಆರತಿ ಪಬ್ಲಿಕೇಷನ್ಸ್ ಮಲ್ಲೇಶ್ವರಂ, ಬೆಂಗಳೂರು, ೨೦೦೨.
6. ರಾಮಮನೋಹರ ಲೋಹಿಯಾ ಚಿಂತನೆ, (ಸಂ.) ನಟರಾಜ ಹುಳಿಯಾರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೮.
7. .ಮಹಿಳೆ ಮತ್ತು ಆಧುನಿಕತೆ (ಸಂ.) ಗವೀಶ ಹಿರೇಮಠ, ಸಂಗಮೇಶ್ವರ ಮಹಿಳಾ ಮಂಡಳ ಗುಲ್ಬರ್ಗಾ, ೨೦೦೮
8. .ದಲಿತ ಅಧ್ಯಯನ, (ಸಂ.) ಡಾ. ಟಿ.ಆರ್. ಚಂದ್ರಶೇಖರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫
9. .ಮಹಿಳೆ ಮತ್ತು ಆರೋಗ್ಯ, ಡಾ. ಕೆ. ಸರೋಜ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧.
10. ಮಹಿಳಾ ಸಮಾಜ ಮತ್ತು ಸಂಸ್ಕೃತಿ, ಡಾ. ಆರ್. ಇಂದಿರಾ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.
11. ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಡಾ. ಎಂ. ಉಷಾ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪.